(ಇಂದು ದಿನಾಂಕಃ 10–09–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ಎಂ ಎಸ್ ಹೆಚ್ ವಕೀಲರಿಂದ ಃ-

10) ನನ್ನ ತಂದೆಯವರ 2 ನೇ ಹೆಂಡತಿಯಾದ ನೀಲಾಂಬಿಕಾ ರವರಿಗೆ ಕರವೀರಯ್ಯ ಹಾಗೂ ಶ್ರೀಕುಮಾರ ಎಂಬ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಶ್ರೀಕುಮಾರ ರವರು ದಿನಾಂಕ 01-04-1997 ರಂದು ಮಂಗಳೂರಿನ ಕೊಂಪದಲು ಊರಿನಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಕರವೀರಯ್ಯ ರವರು ದಿನಾಂಕ 14-02-1993 ರಂದು ಮಂಗಳೂರಿನ ಕೊಂಪದಲು ಊರಿನಲ್ಲಿ ಜನಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಷಯ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

11) ಸದರಿಯವರು ಇಬ್ಬರು ಸಹ ಮಂಗಳೂರಿನಲ್ಲಿ ಜನಿಸಿ ಅಲ್ಲೇ ಜೀವನ ಸಾಗಿಸುತ್ತಾ ನಾಯಕನೂರು ಗ್ರಾಮಕ್ಕೆ ಬರುವುದು ಹೋಗುವುದು ಹಾಗೂ ದಾವಾ ಆಸ್ತಿಯಲ್ಲಿ ಕೃಷಿ ಚಟುವಟಿಕೆ ಮಾಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ನನ್ನ ಸಹೋದರಿಯ ಶಿಕ್ಷಣಕ್ಕೆ ಹಾಗೂ ವಿವಾಹದ ಖರ್ಚಿಗೆ ಹಾಗೂ ದಾವಾ ಆಸ್ತಿಗಳ ದುರಸ್ಥಿಗೆ ಕೆವಿಜಿ ಬ್ಯಾಂಕ ಶಲವಡಿ ಶಾಖೆಯಲ್ಲಿ 1 ಲಕ್ಷ 50 ಸಾವಿರ ರೂಪಾಯಿ ಸಾಲ ಪಡೆದುಕೊಂಡಿದ್ದು ಅದು ಇಲ್ಲಿಯವರೆಗೆ ಕಟಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸಾಲ ಇದ್ದರೆ ನಾನು ತುಂಬುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ವಿವಾಹವು ನನ್ನ ಕಾಕಾ ಹಾಗೂ ನನ್ನ ಮಾವನವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

12) ಕರವೀರಯ್ಯ ಹಾಗೂ ಶ್ರೀಕುಮಾರ ರವರಿಗೆ ದಾವಾ ಆಸ್ತಿಯಲ್ಲಿ ಸಮಾನು ಪಾಲು ಇರುತ್ತದೆ ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರೆಗೆ ವಯಸ್ಸಾಗಿರುತ್ತದೆ ಎಂದರೆ ಸರಿ. ಅವರ ಜೋಪಾಣ ಜತನ ಮಾಡುವುದು ನನ್ನ ಕರ್ತವ್ಯ ಎಂದರೆ ನಾನು ಮಾಡುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 10 ವರ್ಷಗಳ ಹಿಂದೆ ನನ್ನ ತಂದೆ ಬಿದ್ದಿರುತ್ತಾರೆ ನಾನು ಅವರಿಗೆ ಚಿಕಿತ್ಸೆ ನೀಡುತ್ತೇನೆ ಎಂದು ಕರೆದರು ಬಂದಿರುವುದಿಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯವರು ಮಠದಲ್ಲಿ ಮಲಗಿಕೊಂಡಿದ್ದು ನೋಡಲಾರದ ಪರಿಸ್ಥಿತಿಯಲ್ಲಿ ಇದ್ದರು.

13) ನಾನು ಹಾಗೂ ನನ್ನ ಸಹೋದರಿ ಹಾಗೂ ನಮ್ಮ ತಾಯಿ ಕೂಡಿಕೊಂಡು ನನ್ನ ತಂದೆಯವರೆಗೆ ಮನೆಯಿಂದ ಹೊರಹಾಕಿದ ಕಾರಣ ಅವರು ಮಠದಲ್ಲಿ ವಾಸ ಮಾಡುತ್ತಿದ್ದರು ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪಾಲುವಿಭಾಗವಾದಲ್ಲಿ ಅದು ತುಂಡು ಭೂಮಿಯಾಗಿ ಅಲ್ಲಿ ಕೃಷಿ ಚಟುವಟಿಕೆ ಮಾಡಲು ಆಗುವುದಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ತಂದೆಯವರಿಗೆ ಆದಾಯದ ಮೂಲ ಎಂದರೆ ಸರಿ. ತಂದೆಯವರು ಮಾಡಿದ ಸಾಲವನ್ನು ದಾವಾ ಆಸ್ತಿಯ ಉತ್ಪನ್ನದಿಂದ ಭರಣ ಮಾಡಬೇಕು ಎಂದರೆ ಸಾಕ್ಷಿಯು ಸಾಲದ ಬಗ್ಗೆ ನನಗೆ ಮಾಹಿತಿ ಇಲ್ಲಾ.

14) ನಾನು ಪ್ರಥಮ ಬಾರಿ ಹೊಲಕ್ಕೆ ಹೋದಾಗ ಹೆಸರು ಬಿತ್ತಿರುತ್ತಾರೆ ನಂತರದಲ್ಲಿ ಹೋದಾಗ ನನ್ನ ಬಳಿ ಜಗಳ ಮಾಡಿರುತ್ತಾರೆ. ಹೊಲಕ್ಕೆ ಹೋದ ದಿನಾಂಕ ಗೊತ್ತಿಲ್ಲ. ಹೊಲಕ್ಕೆ ಹೋದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆಯವರು ಪಕ್ಕದ ಜಮೀನಿನಲ್ಲಿರುವ ಕೆರೆಯಿಂದ ನೀರನ್ನು ಹೊತ್ತು ದಾವಾ ಆಸ್ತಿಯಲ್ಲಿ 50 ತೆಂಗಿನ ಸಸಿಗಳನ್ನು ಬೆಳೆಸಿರುತ್ತಾರೆ ಎಂದರೆ ಸಾಕ್ಷಿಯ ದಾವಾ ಹೂಡಿದ ನಂತರದಲ್ಲಿ ಇಂದಿನಿಂದ ಸುಮಾರು 2 ತಿಂಗಳ ಹಿಂದೆ ಅದನ್ನು ಬಿತ್ತಿರುತ್ತಾರೆ. ಸದರಿ ತೆಂಗಿನ ಮರಗಳನ್ನು 8 ವರ್ಷಗಳ ಹಿಂದೆ ಬೆಳೆಸಿರುತ್ತಾರೆ ಎಂದರೆ ಸಾಕ್ಷಿಯು 8 ವರ್ಷದ ಹಿಂದೆ ಕೇವಲ 8-10 ಮರಗಳು ಇದ್ದವು ಎಂದು ನುಡಿಯುತ್ತಾರೆ.

15) ಸದರಿ ಸಸಿಗಳ ಬೆಳವಣಿಗೆಗೆ ನನ್ನ ತಂದೆಯವರು ಬೇರೆ ಕಡೆ ಸಾಲ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲಾ. ಸದರಿ ಸಾಲ ಭರಣ ಮಾಡಲು ನಾನು ಬಾದ್ಯತೆ ಹೊಂದಿರುತ್ತೇನೆ ಎಂದರೆ ಸಾಕ್ಷಿಯು ನಮ್ಮನ್ನು ಕೇಳಿ ಸಾಲ ಮಾಡಿರುವುದಿಲ್ಲ, ಸಾಲದ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ.

16) ನಾಯ್ಕನೂರು ಗ್ರಾಮದಲ್ಲಿ ಮನೆ ಹಾಗೂ ಪಡಜಾಗವಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ದಾವಾ ಆಸ್ತಿಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅದು ನಮ್ಮ ಅಜ್ಜನ ಹೆಸರಿನಲ್ಲಿ ಇರುತ್ತದೆ ಇಲ್ಲಿಯವರೆಗೆ ಪಾಲುವಿಭಾಗವಾಗಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ಪಾಲು

ಹೆಚ್ಚಾಗುತ್ತದೆ ಹಾಗೂ ಕರವೀರಯ್ಯ ಮತ್ತು ಶ್ರೀಕುಮಾರ ರವರಿಗೆ ತಮ್ಮ ಹಕ್ಕಿನಿಂದ ವಂಚನೆ ಮಾಡಬೇಕೆಂಬ ದೂರುದ್ದೇಶದಿಂದ ಸದರಿಯವರನ್ನು ಅವಶ್ಯಕ ಪಕ್ಷಗಾರರಾಗಿ ಮಾಡಿರುವುದಿಲ್ಲ ಅಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿಯವರ ಅನುಪಸ್ಥಿತಿಯಲ್ಲಿ ದಾವೆಯು ಇತ್ಯರ್ಥ ಮಾಡಲು ಬರುವುದಿಲ್ಲ ಅಂದರೆ ಸರಿಯಲ್ಲ. ನನ್ನ ವೃದ್ಧ ತಂದೆಯವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಮಾಹಿತಿಯ ಮೇರೆಗೆ ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**